**ಜಿಲ್ಲಾಧಿಕಾರಿಗಳ ಕಾರ್ಯಾಲಯ,**
**(ಜಿಲ್ಲಾ ನಗರಾಭಿವೃದ್ಧಿ ಕೋಶ),**
**ಕೊಠಡಿ ಸಂ:123, ಜಿಲ್ಲಾಡಳಿತ ಭವನ,ಗದಗ – 582101**
**ದೂ ಸಂ: 08372-231877 (ಫ್ಯಾ)**
ಇ-ಮೇಲ್: dudc_gdg@yahoo.co.in

**Office of the Deputy Commissioner,**
**(District Urban Development Cell),**
Room No: 123
Dist Administrative Buld.
Gadag- 582101
Tel No: 08372-231877 (F)
E-mail: dudc_gdg@yahoo.co.in

ನಂ.ಜಿನಕೋ/ಅಭಿವೃದ್ಧಿ/ಪಪಂಶಿ/ಎಸ್.ಎಫ್.ಸಿ&ಸಾನಿ/ಪ.ಕ್ರಿ.ಯೋ/ವಹಿ 9 /2026-27 ದಿನಾಂಕ 29-04-2026

# ಜಿಲ್ಲಾಧಿಕಾರಿಗಳು ಗದಗ ಇವರ ನಡವಳಿಗಳು

**ವಿಷಯ:** **ಪಟ್ಟಣ ಪಂಚಾಯತ್ ಶಿರಹಟ್ಟಿ:-** ಸನ್ 2026-27 ನೇ ಸಾಲಿಗಾಗಿ ಎಸ್.ಎಫ್.ಸಿ ಮುಕ್ತ ನಿಧಿ & ಎಸ್.ಸಿ.ಎಸ್.ಪಿ (SCSP) ಮತ್ತು ಟಿ.ಎಸ್.ಪಿ (TSP) ಯೋಜನೆಯ ಅನುದಾನದಲ್ಲಿ ಮಂಜೂರಿ ನೀಡಿದ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಿ ಮಂಜೂರಾತಿ ನೀಡುವ ಕುರಿತು

**ಉಲ್ಲೇಖ:**

1. ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಶಿರಹಟ್ಟಿ ಇವರ ಸಂಖ್ಯೆ: ಪಪಂಶಿ/ತಾಂ.ವಿ/ಎಸ್.ಎಫ್.ಸಿ/ಕ್ರಿ.ಯೋ/ವಹಿ/2026-27 ದಿನಾಂಕ:31-03-2026
2. ಸನ್ 2026-27 ನೇ ಸಾಲಿನ ಸರ್ಕಾರದ ಆಯ-ವ್ಯಯದಲ್ಲಿ ಹಂಚಿಕೆಯಂತೆ
3. ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 269 ಎಸ್ಎಫ್‌ಸಿ 2015, ದಿನಾಂಕ:16-06-2015
4. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:2090834/DMA/UPA/SFCU/3/2026 ದಿನಾಂಕ:13-03-2026
5. ಈ ಕಚೇರಿ ಆದೇಶ ಸಂಖ್ಯೆ:ನಂ.ಜಿನಕೋ/ಅಭಿವೃದ್ಧಿ/ಪಪಂಶಿ/ಎಸ್.ಎಫ್.ಸಿ& ಸಾನಿ/ವಹಿ /2026-27 ದಿನಾಂಕ:06-04-2026
6. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ತಿದ್ದೋಲೆ ಸಂಖ್ಯೆ:2090834/DMA/UPA/SFCU/3/2026 ದಿನಾಂಕ:09-04-2026
7. ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಶಿರಹಟ್ಟಿ ಇವರ ಪತ್ರ ಸಂಖ್ಯೆ: ಪಪಂಶಿ/ತಾಂ.ವಿ/ಎಸ್.ಎಫ್.ಸಿ/ಕ್ರಿ.ಯೋ/ವಹಿ/2026-27 ದಿನಾಂಕ:17-04-2026
8. ಪಟ್ಟಣ ಪಂಚಾಯತ ಆಡಳಿತಾಧಿಕಾರಿಗಳ ಠರಾವು ಸಂಖ್ಯೆ:62 ದಿನಾಂಕ:24-03-2026

**ಪ್ರಸ್ತಾವನೆ:**

ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಶಿರಹಟ್ಟಿ ಇವರು ಸನ್ 2026-27 ನೇ ಸಾಲಿಗಾಗಿ ಎಸ್.ಎಫ್.ಸಿ ಮುಕ್ತ ನಿಧಿ, & ಎಸ್.ಸಿ.ಎಸ್.ಪಿ (SCSP) ಮತ್ತು ಟಿ.ಎಸ್.ಪಿ (TSP) ಯೋಜನೆಯ ಅನುದಾನಕ್ಕೆ ತಯಾರಿಸಿದ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡುವ ಉಲ್ಲೇಖ (1) ರಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಿದಂತೆ ಉಲ್ಲೇಖ (2) ರಲ್ಲಿ ಸರ್ಕಾರದ ಆಯ-ವ್ಯಯದಲ್ಲಿ ಶಿರಹಟ್ಟಿ ಪಟ್ಟಣ ಪಂಚಾಯತ ಇವರಿಗೆ ನಿಗದಿಪಡಿಸಲಾದ ಅನುದಾನದ ಅನುಸಾರವಾಗಿ ಉಲ್ಲೇಖ(3&4) ರ ಸುತ್ತೋಲೆಗಳನ್ವಯ ಉಲ್ಲೇಖ(5) ರಲ್ಲಿ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಗಿರುತ್ತದೆ.

ಉಲ್ಲೇಖ(6) ರ ತಿದ್ದೋಲೆಯಲ್ಲಿ ಸನ್ 2026-27 ನೇ ಸಾಲಿನ ಎಸ್.ಸಿ.ಎಸ್.ಪಿ(SCSP) ಮತ್ತು ಟಿ.ಎಸ್.ಪಿ (TSP) ಯೋಜನೆಯ ಅನುದಾನ ಕುರಿತು ಸೂಚಿಸಿದಂತೆ ಉಲ್ಲೇಖ(5) ರಲ್ಲಿ ಮಂಜೂರಿಯಾದ ಕ್ರಿಯಾ ಯೋಜನೆಯನ್ನು ಪರಿಷ್ಕರಿಸಿ ಅನುಮೋದನೆ ನೀಡಲು ಉಲ್ಲೇಖ(7) ರಲ್ಲಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ಶಿರಹಟ್ಟಿ ಇವರು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು, ಸನ್ 2026-27 ನೇ ಸಾಲಿಗೆ ಉಲ್ಲೇಖ (2) ರಲ್ಲಿ ಸರ್ಕಾರದ ಆಯ-ವ್ಯಯದಲ್ಲಿ ಶಿರಹಟ್ಟಿ ಪಟ್ಟಣ ಪಂಚಾಯತ ಇವರಿಗೆ ನಿಗದಿಪಡಿಸಲಾದ ಅನುದಾನದ ವಿವರ ಈ ಕೆಳಗಿನಂತಿರುತ್ತವೆ.

## ಭಾಗ-01

### ಸನ್ 2026-27 ನೇ ಸಾಲಿನ ಎಸ್. ಎಫ್. ಸಿ ಯೋಜನೆಯಡಿ ನಿಗದಿಪಡಿಸಿದ ಅನುದಾನದ ಹಂಚಿಕೆ ವಿವರ

| | |
|---|---|
| ಸನ್ 2026-27 ಸಾಲಿಗೆ ನಿಗದಿಪಡಿಸಿದ ಅನುದಾನ | ರೂ.6.00 ಲಕ್ಷ |
| ಸನ್ 2025-26 ನೇ ಸಾಲಿಗೆ ನಿಗದಿಪಡಿಸಿದ ಅನುದಾನಕ್ಕೆ ಕಡಿಮೆ ಬಿಡುಗಡೆಯಾದ ಅನುದಾನದ (Spill over) | ರೂ.0.00 ಲಕ್ಷ |
| **ಒಟ್ಟು ಸನ್ 2026-27ನೇ ಸಾಲಿಗೆ ಕ್ರಿಯಾ ಯೋಜನೆಗೆ ಲಭ್ಯವಾಗುವ ಮೊತ್ತ** | **ರೂ.6.00 ಲಕ್ಷ** |

### ನಿಗದಿಪಡಿಸಿದ ಅನುದಾನದಲ್ಲಿ ಘಟಕವಾರು ಅನುದಾನದ ಲಭ್ಯತೆಯ ವಿವರ

| | Capital Assets (Incl. 7.25% & 5%) | SCSP (22%) | TSP (7%) | Total |
|---|---|---|---|---|
| ನಿಗದಿಪಡಿಸಿದ ಅನುದಾನ | ರೂ. 5.00 ಲಕ್ಷ | ರೂ.1.00 ಲಕ್ಷ | ರೂ. 0.00 ಲಕ್ಷ | ರೂ.8.00 ಲಕ್ಷ |
| 2025-26 ನೇ ಸಾಲಿನ Spill over ಮೊತ್ತ | ರೂ. 0.00 ಲಕ್ಷ | ರೂ. 0.00 ಲಕ್ಷ | ರೂ. 0.00 ಲಕ್ಷ | ರೂ. 0.00 ಲಕ್ಷ |
| ಸನ್ 2026-27 ನೇ ಸಾಲಿನ SCSP & TSP ನಿಗದಿಪಡಿಸಿದ ಅನುದಾನದಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಫಲಾನುಭವಿ ವಂತಿಗೆಯಾಗಿ ಶೇ.60 ರಷ್ಟು ವೈಯಕ್ತಿಕ ಸಹಾಯಧನದ ಘಟಕದಡಿ ನೇರವಾಗಿ ವರ್ಗಾವಣೆ ಮೊತ್ತ | ರೂ. 0.00 ಲಕ್ಷ | ರೂ.0.60 ಲಕ್ಷ | ರೂ. 0.00 ಲಕ್ಷ | ರೂ.1.20 ಲಕ್ಷ |
| ಪೌರಕಾರ್ಮಿಕರ ಕಲ್ಯಾಣ ಯೋಜನೆ ಶೇ.20 ರಷ್ಟು ಮೊತ್ತ | ರೂ. 0.00 ಲಕ್ಷ | ರೂ. 0.08 ಲಕ್ಷ | ರೂ. 0.00 ಲಕ್ಷ | ರೂ. 0.16 ಲಕ್ಷ |
| **2026-27ನೇ ಸಾಲಿಗೆ ಕ್ರಿಯಾ ಯೋಜನೆ ತಯಾರಿಸಲು ಲಭ್ಯವಿರುವ ಮೊತ್ತ** | **ರೂ.5.00ಲಕ್ಷ** | **ರೂ.0.32 ಲಕ್ಷ** | ರೂ. 0.00 ಲಕ್ಷ | **ರೂ.6.72 ಲಕ್ಷ** |

## ಭಾಗ-02

### ಸನ್ 2026-27 ನೇ ಸಾಲಿನ ಶಿರಹಟ್ಟಿ ಪಟ್ಟಣ ಪಂಚಾಯತ ಅಂದಾಜು ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಹಂಚಿಕೆ ವಿವರ

| ಅ.ನಂ | **ಪಟ್ಟಣ ಪಂಚಾಯತ** ಅಂದಾಜು ಆಯವ್ಯಯದಲ್ಲಿ ನಿರ್ದಿಷ್ಟ ವೆಚ್ಚಗಳನ್ನು ಹೊರತು ಪಡಿಸಿ ಉಳಿಕೆಯಾದ ಅನುದಾನ | ರೂ. 7.50 ಲಕ್ಷ |
|---|---|---|
| 1 | ಸನ್ 2026-27 ನೇ ಸಾಲಿನ ಅಂದಾಜು ಆಯವ್ಯಯದಲ್ಲಿ ಪ.ಜಾ/ ಪ.ಪಂ ಜನಾಂಗದ ಕಲ್ಯಾಣಕ್ಕಾಗಿ (24.10%)ರ ಲೆಕ್ಕಾಚಾರದ ಕಾಯ್ದಿರಿಸಿದ ಮೊತ್ತ(ಶೇ.29) | ರೂ. 1.81 ಲಕ್ಷ |
| 2 | ಸನ್ 2026-27ನೇ ಸಾಲಿನ ಅಂದಾಜು ಆಯವ್ಯಯದಲ್ಲಿ ಇತರೆ ಬಡ ಜನಾಂಗದ ಕಲ್ಯಾಣಕ್ಕಾಗಿ (7.25%)ರ ಲೆಕ್ಕಾಚಾರದ ಕಾಯ್ದಿರಿಸಿದ ಮೊತ್ತ | ರೂ. 0.54 ಲಕ್ಷ |
| 3 | ಸನ್ 2025-26ನೇ ಸಾಲಿನ ಅಂದಾಜು ಆಯವ್ಯಯದಲ್ಲಿ ವಿಕಲಚೇತನ ಜನಾಂಗದ ಕಲ್ಯಾಣಕ್ಕಾಗಿ (5%)ರ ಲೆಕ್ಕಾಚಾರದ ಕಾಯ್ದಿರಿಸಿದ ಮೊತ್ತ | ರೂ. 0.37 ಲಕ್ಷ |

ಈ ಮೇಲಿನಂತೆ ಭಾಗ-1 ಮತ್ತು ಭಾಗ-2 ರಲ್ಲಿ ಕ್ರಮವಾಗಿ ಎಸ್.ಎಫ್.ಸಿ ಅನುದಾನದಲ್ಲಿ ಸನ್ 2026-27 ನೇ ಸಾಲಿಗೆ ಕ್ರಿಯಾ ಯೋಜನೆ ತಯಾರಿಸಲು ಅನುದಾನ ಹಂಚಿಕೆಯಾಗಿದ್ದು ಸರ್ಕಾರದ ಮಾರ್ಗಸೂಚಿ ಸುತ್ತೋಲೆ ಸಂಖ್ಯೆ ನಅಇ/269/ ಎಸ್.ಎಫ್.ಸಿ/2015 ಬೆಂಗಳೂರು ದಿ:16-05-2015 ರಲ್ಲಿ

ಮಾರ್ಗಸೂಚಿಗಳನ್ವಯ ಹಾಗೂ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರುರವರ ತಿದ್ದೋಲೆ ಸಂಖ್ಯೆ:2090834/DMA/UPA/SFCU/3/2026 ದಿನಾಂಕ:09-04-2026 ರನ್ವಯ ತಯಾರಿಸಿ ಸಲ್ಲಿಸಿರುತ್ತಾರೆ.

ಹಾಗೂ(1)ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/25/ಪಿಎನ್‌ಜಿ/2018 ಬೆಂಗಳೂರು ದಿನಾಂಕ :07-06-2019ರಂತೆ ಶೇ.5 ರಷ್ಟು ವಿಕಲಚೇತನರ ಕಲ್ಯಾಣ ನಿಧಿ ಅನುದಾನದ. (2) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/20/ಪಿಎನ್‌ಜಿ/2018 ಬೆಂಗಳೂರು ದಿನಾಂಕ:16-01-2019 ರಂತೆ ಶೇ.24.10 ರಷ್ಟು ಪಜಾ/ಪಪಂ ಅನುದಾನ. (3) ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ/23/ಪಿಎನ್‌ಜಿ/2018 ಬೆಂಗಳೂರು ದಿನಾಂಕ:03-06-2019 ರಂತೆ ಶೇ.7.25 ರಷ್ಟು ಇತರೆ ಬಡಜನರ ಕಲ್ಯಾಣ ಅನುದಾನಗಳ ಸುತ್ತೋಲೆಯ ಮಾರ್ಗಸೂಚಿಯನುಸಾರ ಲೆಕ್ಕಾಚಾರ ಮತ್ತು ಕ್ರಿಯಾ ಯೋಜನೆಗಳನ್ನು ತಯಾರಿಸಿರುತ್ತಾರೆ.

ಮುಖ್ಯಾಧಿಕಾರಿ ಪಟ್ಟಣ ಪಂಚಾಯತಿ ಶಿರಹಟ್ಟಿ ಇವರು ತಯಾರಿಸಿದ ಪರಿಷ್ಕೃತ ಕ್ರಿಯಾ ಯೋಜನೆಯನ್ನು ಪಟ್ಟಣ ಪಂಚಾಯತಿ ಆಡಳಿತಾಧಿಕಾರಿಗಳ ಸಭೆ ಠರಾವು ಸಂಖ್ಯೆ:62 ದಿನಾಂಕ:24-03-2026 ರಲ್ಲಿ ಮಂಡಿಸಿ ಅನುಮೋದನೆ ಪಡೆದಿರುತ್ತಾರೆ. ಸದರಿ ಕ್ರಿಯಾ ಯೋಜನೆಯನ್ನು ಪರೀಶಿಲಿಸಿ ಭಾಗ-1 ರಲ್ಲಿ ಸನ್ 2026-27 ನೇ ಸಾಲಿನ ಎಸ್.ಎಫ್.ಸಿ ಯೋಜನೆಯಡಿ Capital Assets (Incl. 7.25% & 5%) ರೂ.5.00 ಲಕ್ಷ SCSP(22%) ರಲ್ಲಿ ರೂ.01.00 ಲಕ್ಷಗಳಿಗೆ ಹಾಗೂ ಭಾಗ-2 ರಲ್ಲಿ ಸನ್ 2026-27 ನೇ ಸಾಲಿನ ಪಟ್ಟಣ ಪಂಚಾಯತಿ ನಿಧಿಯಲ್ಲಿ SCSP(22%) ರಲ್ಲಿ ರೂ.1.29 ಲಕ್ಷ TSP(7%) ರಲ್ಲಿ ರೂ.0.52 ಲಕ್ಷ ಗಳ ಶೇ. 7.25 ರಷ್ಟು ರೂ.0.54 ಲಕ್ಷ & ಶೇ. 5 ರಷ್ಟು ರೂ. 0.37 ಲಕ್ಷ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಬಹುದಾಗಿದೆ.

ಸರ್ಕಾರದ ಅಧಿಸೂಚನೆಯ ಸಂಖ್ಯೆ ನಅಇ/184/ಎಂಎನ್‌ಇ/2015 ದಿನಾಂಕ:11-11-2016 ರಲ್ಲಿ ರೂ.5.00 ಕೋಟಿವರೆಗಿನ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರಿ ಪ್ರದತ್ತವಾಗಿರುವುದರಿಂದ ಕ್ರಿಯಾ ಯೋಜನೆಯನ್ನು ಅನುಮೋದನೆ ನೀಡುವ ಕುರಿತು ಈ ಕೆಳಗಿನಂತೆ ಆದೇಶ.

**ಆದೇಶ ಸಂಖ್ಯೆ:ಜಿನಕೋ/ಅಭಿವೃದ್ಧಿ/ಪಪಂಶಿ/ಎಸ್.ಎಫ್.ಸಿ&ಸಾನಿ/ ಪ.ಕ್ರಿ.ಯೋ/ವಹಿ-9/2026-27**
**ದಿನಾಂಕ:29-04-2026**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಪಟ್ಟಣ ಪಂಚಾಯತಿ ಶಿರಹಟ್ಟಿ ಇವರಿಗೆ ಸನ್ 2026-27 ನೇ ಸಾಲಿನ ಭಾಗ-1 ರಲ್ಲಿ ಸನ್ 2026-27 ನೇ ಸಾಲಿನ ಎಸ್.ಎಫ್.ಸಿ ಯೋಜನೆಯಡಿ ಬಂಡವಾಳ ಆಸ್ತಿಗಳ ಸೃಜನೆಯಡಿ ರೂ.5.00 ಲಕ್ಷಗಳು (Capital Assets & ಶೇ.7.25 & 5%), SCSP (22%) ರಲ್ಲಿ ರೂ.1.00 ಲಕ್ಷಗಳಿಗೆ ಕ್ರಿಯಾ ಯೋಜನೆಗಳಿಗೆ ಹಾಗೂ ಭಾಗ-2 ರಲ್ಲಿ ಸನ್ 2026-27 ನೇ ಸಾಲಿನ ಪಟ್ಟಣ ಪಂಚಾಯತಿ ಆಯವ್ಯಯದಲ್ಲಿ ಶೇ.24.10ರ (29%) SCSP (22%) TSP (7%)ರಲ್ಲಿ ರೂ.1.81 ಲಕ್ಷ ಶೇ.7.25% ರಲ್ಲಿ ರೂ.0.54 ಲಕ್ಷ & 5% ರಲ್ಲಿ ರೂ.0.37 ಲಕ್ಷಗಳ ಕ್ರಿಯಾ ಯೋಜನೆಗಳಿಗೆ ಈ ಕೆಳಗಿನ ಷರತ್ತಿಗೊಳಪಟ್ಟು ಮಂಜೂರಾತಿ ನೀಡಿದೆ.

## ಭಾಗ-01

### ಸನ್ 2026-27 ನೇ ಸಾಲಿನ ಎಸ್.ಎಫ್.ಸಿ ಯೋಜನೆಯಡಿ ಕ್ರಿಯಾ ಯೋಜನೆಯ ವಿವರ

| | Capital Assets | 7.25% | 5% | Total |
|---|---|---|---|---|
| ನಿಗಧಿಪಡಿಸಿದ ಅನುದಾನ | ರೂ.4.39 ಲಕ್ಷ | ರೂ.0.36 ಲಕ್ಷ | ರೂ.0.25 ಲಕ್ಷ | ರೂ.5.00 ಲಕ್ಷ |

**A. ಮುಕ್ತ ನಿಧಿಯ ಬಂಡವಾಳ ಆಸ್ತಿಗಳ ಸೃಜನೆಯಡಿ (Creation of Capital Assets) ಲಭ್ಯವಾದ ರೂ.4.39 ಲಕ್ಷಗಳ ಅನುದಾನದಲ್ಲಿ ತಯಾರಿಸಿದ ಕ್ರಿಯಾ ಯೋಜನೆಯ ವಿವರ.**

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಶಿರಹಟ್ಟಿ ಪಟ್ಟಣ ಪಂಚಾಯತಗೆ 4000 ಲೀ. ಸಾಮರ್ಥ್ಯದ 02 ನೀರಿನ ಟ್ಯಾಂಕರಗಳನ್ನು ಖರೀದಿಸುವುದು | ರೂ.4.39 ಲಕ್ಷ |
| | **ಒಟ್ಟು** | **ರೂ.4.39 ಲಕ್ಷ** |

**B. ಶೇ. 7.25 ರಷ್ಟು ಲಭ್ಯವಾದ ರೂ.0.36 ಲಕ್ಷಗಳ ತಯಾರಿಸಿದ ಕ್ರಿಯಾಯೋಜನೆ ವಿವರ**

1) ವೈಯಕ್ತಿಕ ಅಭಿವೃದ್ಧಿ ಕಾರ್ಯಕ್ರಮಗಳು ಶೇ.40 ರಷ್ಟು ಮೊತ್ತ ರೂ.0.35 ಲಕ್ಷಗಳು

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಶಿರಹಟ್ಟಿ ಪ.ಪಂ. ವ್ಯಾಪ್ತಿಯಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಅಲ್ಮಾರ್ ಖರೀದಿಸಿ ಪೂರೈಸುವುದು | ರೂ.0.36 ಲಕ್ಷ |
| | **ಒಟ್ಟು** | **ರೂ.0.36 ಲಕ್ಷ** |

**ಟಿಪ್ಪಣಿ:** ವೈಯಕ್ತಿಕ ಕಾರ್ಯಕ್ರಮಕ್ಕೆ ಅನುದಾನ ಅವಶ್ಯಕತೆ ಇಲ್ಲದ ಕಾರಣ ಸಮುದಾಯ ಆಧಾರಿತ ಕಾರ್ಯಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸಿದಂತೆ ಅಳವಡಿಸಲಾಗಿದೆ.

**C. ಶೇ. 5 ರಷ್ಟು ಲಭ್ಯವಾದ ರೂ.0.25 ಲಕ್ಷಗಳ ಅನುದಾನದಲ್ಲಿ ವಿಶೇಷ ವರ್ಗದ ಕಲ್ಯಾಣ ಕಾರ್ಯಕ್ರಮಕ್ಕೆ ಮೀಸಲಿಟ್ಟ ಅನುದಾನದ ವಿವರ.**

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಶಿರಹಟ್ಟಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಇರುವ ವಿಶೇಷ ಚೇತನರಿಗೆ ಇಲೆಕ್ಟ್ರಿಕ್ ವ್ಹೀಲ್ ಚೇರ್ ಖರೀದಿಸಿ ಪೂರೈಸುವುದು | ರೂ.0.25 ಲಕ್ಷ |
| | **ಒಟ್ಟು** | **ರೂ.0.25 ಲಕ್ಷ** |

**ಟಿಪ್ಪಣಿ:** ಸಮುದಾಯ ಕಾರ್ಯಕ್ರಮಕ್ಕೆ ಅನುದಾನ ಅವಶ್ಯಕತೆ ಇಲ್ಲದ ಕಾರಣ ವೈಯಕ್ತಿಕ ಆಧಾರಿತ ಕಾರ್ಯಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸಿದಂತೆ ಅಳವಡಿಸಲಾಗಿದೆ.

**ಶೇ. 24.10 (29ರ ಲೆಕ್ಕಾಚಾರ) ರಷ್ಟು ಲಭ್ಯವಾದ ಅನುದಾನದಲ್ಲಿ SCSP/TSP ಘಟಕವಾರು ಅನುದಾನದ ವಿವರ**

| | SCSP (22%) | ಒಟ್ಟು |
|---|---|---|
| ಕ್ರಿಯಾ ಯೋಜನೆ ತಯಾರಿಸಲು ಲಭ್ಯವಿರುವ ಮೊತ್ತ | ರೂ.1.00 ಲಕ್ಷ | ರೂ.1.00 ಲಕ್ಷ |
| ಸನ್ 2026-27 ನೇ ಸಾಲಿನ SCSP & TSP ನಿಗದಿಪಡಿಸಿದ ಅನುದಾನದಲ್ಲಿ ದಿನಾಂಕ:09-04-2026 ರ ಆದೇಶದನ್ವಯ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಫಲಾನುಭವಿ ವಂತಿಕೆಯಾಗಿ ಶೇ.60 ರಷ್ಟು ವೈಯಕ್ತಿಕ ಸಹಾಯಧನದ ಘಟಕದಡಿ ನೇರವಾಗಿ ವರ್ಗಾವಣೆ ಮೊತ್ತ | ರೂ.0.60 ಲಕ್ಷ | ರೂ.0.60 ಲಕ್ಷ |
| ಪೌರಕಾರ್ಮಿಕರ ಕಲ್ಯಾಣ ಯೋಜನ ಶೇ.20 ರಷ್ಟು ಮೊತ್ತ | ರೂ. 0.08 ಲಕ್ಷ | ರೂ. 0.08 ಲಕ್ಷ |
| **ಲಭ್ಯವಾಗುವ ಒಟ್ಟು ಮೊತ್ತ ರೂ.** | **ರೂ.0.32 ಲಕ್ಷ** | **ರೂ.0.32 ಲಕ್ಷ** |

A. **ಶೇ.24.10ರ ಯೋಜನೆಯಡಿಯಲ್ಲಿ ಮಂಜೂರಾದ ಮೊತ್ತಕ್ಕೆ ಶೇ.20 ರಷ್ಟು ಮೊತ್ತವನ್ನು ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಅನುದಾನ ರೂ.0.08 ಲಕ್ಷಗಳ**

| ಅ.ನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಸ್ವಚ್ಛತೆ & ನೈರ್ಮಲ್ಯ ಕಾರ್ಯದಲ್ಲಿ ತೊಡಗಿರುವ ಖಾಯಂ/ಗುತ್ತಿಗೆ/ನೇರ ಪಾವತಿ ಪೌರಕಾರ್ಮಿಕರು/ಲೋಡರ್ಸ್‌ಗಳಿಗೆ ಪೂರೈಸಲು ಸುರಕ್ಷಾ ಪರಿಕರಗಳನ್ನು ಖರೀದಿಸುವುದು | ರೂ.0.08 ಲಕ್ಷ |
| | **ಒಟ್ಟು** | **ರೂ.0.08 ಲಕ್ಷ** |

B. **SCSP(22) ಘಟಕದ ಯೋಜನೆಯಡಿಯಲ್ಲಿ ಲಭ್ಯವಾದ ರೂ.0.32 ಲಕ್ಷಗಳ ಅನುದಾನದಲ್ಲಿ ತಯಾರಿಸಿದ ಕ್ರಿಯಾ ಯೋಜನೆ ವಿವರ**

1) ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಶೇ.40 ರಷ್ಟು ಮೊತ್ತ ರೂ.0.32 ಲಕ್ಷಗಳು

| **ಅನಂ** | **ಕ್ರಿಯಾ ಯೋಜನೆಯ ವಿವರ** | **ಅಂದಾಜು ಮೊತ್ತ** |
|---|---|---|
| 1 | ವಾರ್ಡ ನಂ-18 ರ ಡಾ\|\|ಬಿ.ಆರ್.ಅಂಬೇಡ್ಕರ ಭವನದ ಆವರಣದಲ್ಲಿರುವ ಸಿದ್ರಾಮೇಶ್ವರ ಭವನಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ ವೈರಿಂಗ್ ಮಾಡಿಸುವ ಕಾಮಗಾರಿ | ರೂ.0.32 ಲಕ್ಷ |
| | **ಒಟ್ಟು** | **ರೂ.0.32 ಲಕ್ಷ** |

## ಭಾಗ-02

## ಸನ್ 2026-27 ನೇ ಸಾಲಿನ ಶಿರಹಟ್ಟಿ ಪಟ್ಟಣ ಪಂಚಾಯತಿಯ ಆಯವ್ಯಯ ರೂ.2.72 ಲಕ್ಷಗಳ ಕ್ರಿಯಾ ಯೋಜನೆಯ ವಿವರ

I. **ಶೇ. 24.10 (29%) ರಷ್ಟು ಲಭ್ಯವಾದ ರೂ.1.81 ಲಕ್ಷಗಳ ಅನುದಾನದಲ್ಲಿ SCSP/TSP ಘಟಕವಾರು ಅನುದಾನದ ವಿವರ.**

| | **SCSP (22%)** | **TSP (7%)** | **ಒಟ್ಟು** |
|---|---|---|---|
| ಕ್ರಿಯಾ ಯೋಜನೆ ತಯಾರಿಸಲು ಲಭ್ಯವಿರುವ ಮೊತ್ತ | ರೂ. 1.29 ಲಕ್ಷ | ರೂ.0.52 ಲಕ್ಷ | ರೂ. 1.81 ಲಕ್ಷ |
| ಪೌರಕಾರ್ಮಿಕರ ಕಲ್ಯಾಣ ಯೋಜನೆ ಶೇ.20 ರಷ್ಟು ಮೊತ್ತ | ರೂ.0.26 ಲಕ್ಷ | ರೂ.0.10 ಲಕ್ಷ | ರೂ. 0.36 ಲಕ್ಷ |
| ಲಭ್ಯವಾಗುವ ಒಟ್ಟು ಮೊತ್ತ ರೂ | **ರೂ. 1.03 ಲಕ್ಷ** | **ರೂ. 0.42 ಲಕ್ಷ** | **ರೂ. 1.45 ಲಕ್ಷ** |

A. **ಶೇ.24.10ರ (29%) ಯೋಜನೆಯಡಿಯಲ್ಲಿ ಮಂಜೂರಾದ ಮೊತ್ತಕ್ಕೆ ಶೇ.20 ರಷ್ಟು ಮೊತ್ತವನ್ನು ಪೌರಕಾರ್ಮಿಕರ ಕಲ್ಯಾಣಕ್ಕಾಗಿ ಕಾಯ್ದಿರಿಸಿದ ಅನುದಾನ ರೂ.0.36 ಲಕ್ಷಗಳ**

| **ಅನಂ** | **ಕ್ರಿಯಾ ಯೋಜನೆಯ ವಿವರ** | **ಅಂದಾಜು ಮೊತ್ತ** |
|---|---|---|
| 1 | ನೈರ್ಮಲ್ಯ ಕಾರ್ಯದಲ್ಲಿ ತೊಡಗಿರುವ ಪೌರಕಾರ್ಮಿಕರು, ಲೋಡರ್ಸ್, ಡ್ರೈವರ್ಸ್ ಇತರೆ ಸಿಬ್ಬಂದಿಗಳಿಗೆ ಮಾಸ್ಟರ್ ಹೆಲ್ತ್ ಚೆಕ್ ಅಪ್ ಮಾಡಿಸುವುದು | ರೂ.0.36 ಲಕ್ಷ |
| | **ಒಟ್ಟು** | **ರೂ.0.36 ಲಕ್ಷ** |

B. **SCSP ಘಟಕದಲ್ಲಿ ಲಭ್ಯವಾದ ರೂ.1.03 ಲಕ್ಷಗಳ ಅನುದಾನದಲ್ಲಿ ತಯಾರಿಸಿದ ಕ್ರಿಯಾ ಯೋಜನೆ ವಿವರ.**

1) ವಯಕ್ತಿಕ ಕಾರ್ಯಕ್ರಮಗಳು ಶೇ.40 ರಷ್ಟು ಮೊತ್ತ ರೂ.0.41 ಲಕ್ಷಗಳು

| **ಅನಂ** | **ಕ್ರಿಯಾ ಯೋಜನೆಯ ವಿವರ** | **ಅಂದಾಜು ಮೊತ್ತ** |
|---|---|---|
| 1 | ನೈರ್ಮಲ್ಯ ಕಾರ್ಯದಲ್ಲಿ ತೊಡಗಿರುವ ಪೌರಕಾರ್ಮಿಕರು, ಲೋಡರ್ಸ್, ಡ್ರೈವರ್ಸ್ ಇತರೆ ಸಿಬ್ಬಂದಿಗಳಿಗೆ ಮಾಸ್ಟರ್ ಹೆಲ್ತ್ ಚೆಕ್ ಅಪ್ ಮಾಡಿಸುವುದು | ರೂ. 0.41 ಲಕ್ಷ |
| | **ಒಟ್ಟು** | **ರೂ. 0.41 ಲಕ್ಷ** |

2) ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಶೇ.60 ರಷ್ಟು ಮೊತ್ತ ರೂ. 0.62 ಲಕ್ಷಗಳು

| **ಅನಂ** | **ಕ್ರಿಯಾ ಯೋಜನೆಯ ವಿವರ** | **ಅಂದಾಜು ಮೊತ್ತ** |
|---|---|---|
| 1 | ಡಾ\|\| ಬಿ ಆರ್ ಅಂಬೇಡರ್ ರವರ ಜಯಂತಿ ಕಾರ್ಯಕ್ರಮಕ್ಕೆ ಮಾರ್ಗಸೂಚಿಯನುಸಾರ ವಂತಿಕೆ ಪಾವತಿಸುವುದು. | ರೂ.0.10 ಲಕ್ಷ |
| 2 | ವಾರ್ಡ ನಂ-18 ರ ಅಂಬೇಡ್ಕರ್ ಭವನದ ಆವರಣದಲ್ಲಿ ಇರುವ ಸಿದ್ರಾಮೇಶ್ವರ ಭವನಕ್ಕೆ ಇರುವ ಕಿಟಕಿ & ಬಾಗಿಲುಗಳನ್ನು ನವೀಕರಿಸಿ ಭವನಕ್ಕೆ ಬಣ್ಣ ಹಚ್ಚುವುದು | ರೂ.0.52 ಲಕ್ಷ |
| | **ಒಟ್ಟು** | **ರೂ.0.52 ಲಕ್ಷ** |

## C. TSP ಘಟಕದಲ್ಲಿ ಲಭ್ಯವಾದ ರೂ.0.42 ಲಕ್ಷಗಳ ಅನುದಾನದಲ್ಲಿ ತಯಾರಿಸಿದ ಕ್ರಿಯಾ ಯೋಜನೆ ವಿವರ.

1) ವಯಕ್ತಿಕ ಕಾರ್ಯಕ್ರಮಗಳು ಶೇ.40 ರಷ್ಟು ಮೊತ್ತ ರೂ.0.17 ಲಕ್ಷಗಳು

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಕಂಪ್ಯೂಟರ್ ತರಬೇತಿ ನೀಡಲು ತಗಲುವ ವೆಚ್ಚ | ರೂ. 0.17 ಲಕ್ಷ |
| | **ಒಟ್ಟು** | **ರೂ. 0.17 ಲಕ್ಷ** |

2) ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು ಶೇ.60 ರಷ್ಟು ಮೊತ್ತ ರೂ.0.25 ಲಕ್ಷಗಳು.

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಮಾರ್ಗಸೂಚಿಯನುಸಾರ ವಂತಿಕೆ ಪಾವತಿಸುವುದು. | ರೂ. 0.10 ಲಕ್ಷ |
| 2 | ವಾರ್ಡ ನಂ-14 ರವಾಲ್ಮೀಕಿ ಭವನದ ಮೊದಲನೇ ಮಹಡಿಯಲ್ಲಿರುವ ಕಟ್ಟಡಕ್ಕೆ ವೈರಿಂಗ್ ಮಾಡಿಸುವುದು | ರೂ.0.15 ಲಕ್ಷ |
| | **ಒಟ್ಟು** | **ರೂ.0.25 ಲಕ್ಷ** |

## II. ಶೇ. 7.25 ರಷ್ಟು ಲಭ್ಯವಾದ ರೂ.0.54 ಲಕ್ಷಗಳ ಅನುದಾನದಲ್ಲಿ ಇತರೆ ಬಡ ಜನರ ಕಲ್ಯಾಣಕ್ಕೆ ಮೀಸಲಿಟ್ಟ ಅನುದಾನದ ವಿವರ

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಡೇ ನಲ್ಮ ಯೋಜನೆಯಲ್ಲಿ ಸ್ವಯಂ-ಉದ್ಯೋಗಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದ ಅರ್ಹ ಫಲಾನುಭವಿಗಳಿಗೆ ಸಾಲದ ಮರುಪಾವತಿಗಾಗಿ ಮಾರ್ಗಸೂಚಿ ಅನುಸಾರ ಸಹಾಯಧನ ಪಾವತಿಸುವುದು | ರೂ.0.54 ಲಕ್ಷ |
| | **ಒಟ್ಟು** | **ರೂ. 0.54 ಲಕ್ಷ** |

**ಟಿಪ್ಪಣಿ:** ಸಮುದಾಯ ಕಾರ್ಯಕ್ರಮಕ್ಕೆ ಅನುದಾನ ಅವಶ್ಯಕತೆ ಇಲ್ಲದ ಕಾರಣ ವೈಯಕ್ತಿಕ ಆಧಾರಿತ ಕಾರ್ಯಕ್ರಮಕ್ಕೆ ಪ್ರಸ್ತಾವನೆ ಸಲ್ಲಿಸಿದಂತೆ ಅಳವಡಿಸಲಾಗಿದೆ.

## III. ಶೇ. 5 ರಷ್ಟು ಲಭ್ಯವಾದ ರೂ.0.37 ಲಕ್ಷಗಳ ಅನುದಾನದಲ್ಲಿ ವಿಶೇಷ ವರ್ಗದ ಕಲ್ಯಾಣ ಕಾರ್ಯಕ್ರಮಕ್ಕೆ ಮೀಸಲಿಟ್ಟ ಅನುದಾನದ ವಿವರ

| ಅನಂ | ಕ್ರಿಯಾ ಯೋಜನೆಯ ವಿವರ | ಅಂದಾಜು ಮೊತ್ತ |
|---|---|---|
| 1 | ಶಿರಹಟ್ಟಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಇರುವ ವಿಶೇಷ ಚೇತನರಿಗೆ ಇಲೆಕ್ಟ್ರಿಕಲ್ ವ್ಹೀಲ್ ಚೇರ್ ಖರೀದಿಸಿ ಪೂರೈಸುವುದು | ರೂ.0.37 ಲಕ್ಷ |
| | **ಒಟ್ಟು** | **ರೂ.0.37 ಲಕ್ಷ** |

**ಷರತ್ತುಗಳು:-**

1. ಅನುಮೋದನೆಯಾಗಿರುವ ಕಾಮಗಾರಿಗಳನ್ನು / ಖರೀದಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 1999 ಮತ್ತು ಅಧಿನಿಯಮ 2000 ರಂತೆ ಇ-ಟೆಂಡರ ಅಲ್ಪಾವಧಿ ಮುಖಾಂತರ ಕೈಗೊಳ್ಳತಕ್ಕದ್ದು.
2. ಕಾಮಗಾರಿಗಳನ್ನು ಶೀಘ್ರವಾಗಿ ಹಾಗೂ ಗುಣಮಟ್ಟದೊಂದಿಗೆ ನಿರ್ವಹಿಸಲು ಬಿಡಿಬಿಡಿಯಾಗಿ ಟೆಂಡರ ಕರೆಯದೇ ಕಡ್ಡಾಯವಾಗಿ ಪ್ಯಾಕೇಜ ರೀತಿಯಲ್ಲಿ ಟೆಂಡರ ಕರೆಯುವುದು.
3. ಕಾಮಗಾರಿಗಳ ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯತಕ್ಕದ್ದು.
4. ಕ್ರಿಯಾ ಯೋಜನೆಯ ಅನುಮೋದಿತ ಮೊತ್ತಕ್ಕಿಂತ ಹೆಚ್ಚುವರಿಯಾದಲ್ಲಿ ಸದರಿ ಮೊತ್ತವನ್ನು ಸ್ಥಳೀಯ ಸಂಸ್ಥೆಯ ನಿಧಿಯಿಂದ ಭರಿಸತಕ್ಕದ್ದು.

5. ಕಾಮಗಾರಿಗಳ ಗುಣಮಟ್ಟದ ಬಗ್ಗೆ 3ನೇ ವ್ಯಕ್ತಿ ತಪಾಸಣಾ ಏಜೇನ್ಸಿಯಿಂದ ಪರಿಶೀಲನೆ ಮಾಡಿಸಿ ಉತ್ತಮ ಕಾರ್ಯಾನಿರ್ವಹಣೆಯ ಬಗ್ಗೆ ಪ್ರಮಾಣ ಪತ್ರ ಪಡೆಯತಕ್ಕದ್ದು.
6. ಅನುದಾನದ ಬಳಕೆ ಬಗ್ಗೆ ಮುಕ್ತಾಯಗೊಂಡ ನಂತರ ನಿಗದಿತ ನಮೂನೆಯಲ್ಲಿ ತ್ರೈಮಾಸಿಕೆ (Quarterly) ಹಣ ಬಳಕೆ ಪ್ರಮಾಣ ಪತ್ರವನ್ನು (Utilization Certificate) ಪೌರಾಡಳಿತ ನಿರ್ದೇಶನಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
7. ಕಾಮಗಾರಿ ಗುಣಮಟ್ಟದಲ್ಲಿ ಲೋಪದೋಷಗಳು ಕಂಡು ಬಂದಲ್ಲಿ ಮುಖ್ಯಾಧಿಕಾರಿಗಳು / ಸಹಾಯಕ/ಕಿರಿಯ ಅಭಿಯಂತರರನ್ನೇ ಹೊಣೆಗಾರನ್ನಾಗಿ ಮಾಡುವದು.
8. ಮೇಲಿನಂತಿರುವ ಕಾಮಗಾರಿಗಳನ್ನು ಈ ಹಿಂದೇ ಯಾವುದೇ ಅನುದಾನದಲ್ಲಿ ಅಥವಾ ಪಟ್ಟಣ ಪಂಚಾಯತಿ ನಿಧಿಯಲ್ಲಿ ಕೈಕೊಂಡಿರುವುದಿಲ್ಲವೆಂದು ಧೃಡೀಕರಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಂತಹ ಕಾಮಗಾರಿಗಳು ಕಂಡು ಬಂದಲ್ಲಿ ಮುಖ್ಯಾಧಿಕಾರಿಗಳು / ಅಭಿಯಂತರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
9. ಕ್ರಿಯಾ ಯೋಜನೆ ಮಂಜೂರಾತಿ ನೀಡಿದ ಅನುದಾನವನ್ನು ಯಾವು ಉದ್ದೇಶಕ್ಕಾಗಿ ಮಂಜೂರಾತಿ ನೀಡಲಾಗಿದೆಯೋ ಅದೇ ಉದ್ದೇಶಕ್ಕೆ ಬಳಕೆ ಮಾಡತಕ್ಕದ್ದು. ಅನ್ಯತಾ ಹಣವನ್ನು ಬೇರೆ ಉದ್ದೇಶ ಅಥವಾ ಹಣವನ್ನು ವರ್ಗಾವಣೆ ಮಾಡುವಂತಿಲ್ಲ.
10. ಶೇ.24.10, ಶೇ.7.25 & ಶೇ.5 ರ ಅನುದಾನವನ್ನು ಮಾರ್ಗಸೂಚಿ ಅನುಸಾರ ವೆಚ್ಚ ಮಾಡತಕ್ಕದ್ದು. ಮಾರ್ಗಸೂಚಿ ವ್ಯತಿರಿಕ್ತವಾಗಿ ವೆಚ್ಚ ಮಾಡಿದಲ್ಲಿ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
11. ಪರಿಶಿಷ್ಠ ಜಾತಿ & ಪರಿಶಿಷ್ಠ ಪಂಗಡದ ಜನಾಂಗದವರು ಕಲ್ಯಾಣ ಕಾರ್ಯಕ್ರಮಕ್ಕೆ ಮೀಸಲಿರಿಸಿದ ಸಮುದಾಯ ಹಾಗೂ ವೈಯಕ್ತಿಕ ಕಾರ್ಯಕ್ರಮಗಳನ್ನು ಮಾರ್ಗಸೂಚಿ ಅನುಸಾರ ಆಯಾ ಜನಾಂಗದ ಸೌಲಭ್ಯಕ್ಕೆ ಬಳಸುವುದು. ಹೊರತುಪಡಿಸಿ ಇತರೆ ಜನಾಂಗದ ಸೌಲಭ್ಯಕ್ಕೆ ವರ್ಗಾವಣೆ ಮಾಡಕೂಡದು.

29/4.

(ಸಿ ಎನ್ ಶ್ರೀಧರ. **ಭಾ.ಆ.ಸೇ**)

**ಜಿಲ್ಲಾಧಿಕಾರಿಗಳು ಗದಗ**

**ಪ್ರತಿ ಗೌರವಪೂರ್ವಕವಾಗಿ**

1. ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರಿಗೆ.

**ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.**

2. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ
3. ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ
5. ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಶಿರಹಟ್ಟಿ
6. ಕಿರಿಯ ಅಭಿಯಂತರರು, ಪಟ್ಟಣ ಪಂಚಾಯತ್ ಶಿರಹಟ್ಟಿ
7. ಕಚೇರಿ ಕಡತಕ್ಕೆ